# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ರಾಜ್ಯದಲ್ಲಿರುವ ಅಲೆಮಾರಿ ಜನಾಂಗದವರ ಕಾರ್ಯಕ್ರಮಗಳನ್ನು ಜಾರಿಗೊಳಿಸಲು ಪ್ರತ್ಯೇಕ ವಿಶೇಷ ಕೋಶವನ್ನು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಆಯುಕ್ತರು/ನಿರ್ದೇಶಕರ ಕಛೇರಿಯಲ್ಲಿ ಸೃಷ್ಟಿಸಿ ವಿಶೇಷಾಧಿಕಾರಿ ಹಾಗು ಸಿಬ್ಬಂದಿ ನೇಮಿಸಿ ಕಾರ್ಯನಿರ್ವಹಿಸುವ ಬಗ್ಗೆ

ಓದಲಾಗಿದೆ:

1. ಸಂಪಾದಕರು, ವಾಯ್ಸ್ ಆಫ್ ಫಾರ್ಮರ್ಸ್, ಕನ್ನಡ ಮಾಸ ಪತ್ರಿಕೆ, ಬೆಂಗಳೂರು ರವರ 03.03.2006ರ ಮನವಿ ಹಾಗೂ ಅಧ್ಯಕ್ಷರು, ಕರ್ನಾಟಕ ರಾಜ್ಯ ಅಲೆಮಾರಿ ಜನಾಂಗದವರ ಅಭಿವೃದ್ಧಿ ಸಂಸ್ಥೆ, ಬೆಂಗಳೂರು ಇವರ ದಿನಾಂಕ:09.04.2007ರ ಮನವಿ.
2. ನಿರ್ದೇಶಕರು, ಹಿಂದುಳಿದ ವರ್ಗಗಳ ಇಲಾಖೆ ರವರ ಪ್ರಸ್ತಾವನೆ ಸಂಖ್ಯೆ: ಹಿಂವಕ/ವಿಶ/ಸಿಆರ್-01/2005-06, ದಿನಾಂಕ:24.03.2006.

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಮನವಿಯಲ್ಲಿ ಅಧ್ಯಕ್ಷರು, ಕರ್ನಾಟಕ ರಾಜ್ಯ ಅಲೆಮಾರಿ ಜನಾಂಗದವರ ಅಭಿವೃದ್ಧಿ ಸಂಸ್ಥೆ, ಬೆಂಗಳೂರು ಹಾಗೂ ಸಂಪಾದಕರು, ವಾಯ್ಸ್ ಆಫ್ ಫಾರ್ಮರ್ಸ್, ಕನ್ನಡ ಮಾಸ ಪತ್ರಿಕೆ, ಬೆಂಗಳೂರು ಇವರು ಕರ್ನಾಟಕ ರಾಜ್ಯದಲ್ಲಿನ ಅಲೆಮಾರಿ ಜನಾಂಗದವರ ಕಾರ್ಯಕ್ರಮಗಳನ್ನು ಜಾರಿಗೊಳಿಸಲು ಪ್ರತ್ಯೇಕ ಇಲಾಖೆ/ಕೋಶವನ್ನು ಸೃಷ್ಟಿಸಿ, ವಿಶೇಷಾಧಿಕಾರಿ ಮತ್ತು ಸಿಬ್ಬಂದಿಯನ್ನು ನೇಮಿಸುವಂತೆ ಸರ್ಕಾರವನ್ನು ಕೋರಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ(2)ರಲ್ಲಿ ನಿರ್ದೇಶಕರು, ಹಿಂದುಳಿದ ವರ್ಗಗಳ ಇಲಾಖೆ, ಬೆಂಗಳೂರು ಇವರು ಸಲ್ಲಿಸಿರುವ ಪ್ರಸ್ತಾವನೆಯಲ್ಲಿ ಈ ಕೆಳಕಂಡ ಹುದ್ದೆಗಳನ್ನು ಸದರಿ ಇಲಾಖೆಯಲ್ಲಿ (ಹಿಂದುಳಿದ ವರ್ಗಗಳ ಇಲಾಖೆ) ಮಂಜೂರಾದ ಹುದ್ದೆಗಳನ್ನು ಮರು ಹೊಂದಾಣಿಕೆ ಮಾಡಿ 2006-07ನೇ ಸಾಲಿನಲ್ಲಿ ಲೆಕ್ಕ ಶೀರ್ಷಿಕೆ 2225-03-001-0-71ರ ಅಡಿಯಲ್ಲಿ (ಯೋಜನೆ) ವಿತರಿಸಿರುವ ಮೊಬಲಗಿನಲ್ಲಿ ವೆಚ್ಚ ಭರಿಸುವುದಾಗಿ ತಿಳಿಸುತ್ತಾ, ಈ ಮೇರೆಗೆ ಈ ಕೋಶಕ್ಕಾಗಿ ಯಾವುದೇ ಹುದ್ದೆಗಳನ್ನು ಸೃಜಿಸುವ ಅಗತ್ಯ ಇಲ್ಲವೆಂದೂ ಅಂತೆಯೇ ಯಾವುದೇ ಆರ್ಥಿಕ ಹೊರೆಯು ಇರುವುದಿಲ್ಲ ಎಂಬುದಾಗಿ ತಿಳಿಸಿರುತ್ತಾರೆ.

| ಕ್ರ.ಸಂ. | ಹುದ್ದೆಗಳು | ಸಂಖ್ಯೆ | ನಿರ್ವಹಿಸಬೇಕಾದ ಕರ್ತವ್ಯಗಳು |
|---|---|---|---|
| 1) | ಜಂಟಿ ನಿರ್ದೇಶಕರು | 01 | ವಿಶೇಷಾಧಿಕಾರಿ |
| 2) | ಉಪ ನಿರ್ದೇಶಕರು | 01 | ಕಲ್ಯಾಣಾಧಿಕಾರಿ |
| 3) | ಸಹಾಯಕ ನಿರ್ದೇಶಕರು | 01 | ಸಹಾಯಕ ಕಲ್ಯಾಣಾಧಿಕಾರಿ |
| 4) | ಕಛೇರಿ ಅಧೀಕ್ಷಕರು | 01 | ಕೋಶದ ಉಸ್ತುವಾರಿ |

...2

| | | | |
|---|---|---|---|
| 5) | ಪ್ರಥಮ ದರ್ಜೆ ಸಹಾಯಕರು | 02 | ಕಾರ್ಯಕ್ರಮದ ನಿರ್ವಹಣೆ |
| 6) | ದ್ವಿತೀಯ ದರ್ಜೆ ಸಹಾಯಕರು | 02 | ಕಛೇರಿ ನಿರ್ವಹಣೆ |
| 7) | ಶೀಘ್ರಲಿಪಿಗಾರರು | 01 | ಕಛೇರಿ ನಿರ್ವಹಣೆ, ವಿಶೇಷಾಧಿಕಾರಿ ಸಹಾಯಕ |
| 8) | ಬೆರಳಚ್ಚುಗಾರರು | 01 | ಕಛೇರಿ ನಿರ್ವಹಣೆ |
| 9) | ವಾಹನ ಚಾಲಕರು | 02 | ಕಛೇರಿ ನಿರ್ವಹಣೆ |
| 10) | ಗ್ರೂಪ್ ಡಿ ನೌಕರರು | 02 | ಕಛೇರಿ ನಿರ್ವಹಣೆ |
| | ಒಟ್ಟು | 14 | (ಹದಿನಾಲ್ಕು ಮಾತ್ರ) |

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಆಯುಕ್ತರ ದಿನಾಂಕ:24.03.2006ರ ವರದಿಯ ಹಿನ್ನೆಲೆಯಲ್ಲಿ ಈ ಮೇಲ್ಕಂಡ ಪ್ರಸ್ತಾವನೆಯನ್ನು ಸರ್ಕಾರ ಪರಿಶೀಲಿಸಿದೆ. ಅಲೆಮಾರಿ ಜನಾಂಗದವರ ಸರ್ವತೋಮುಖ ಅಭಿವೃದ್ಧಿಗಾಗಿ ಪ್ರತ್ಯೇಕ ಕೋಶವನ್ನು ವಿಶೇಷಾಧಿಕಾರಿ ಮತ್ತು ಸಿಬ್ಬಂದಿಯೊಡನೆ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವ್ಯಾಪ್ತಿಯಲ್ಲೇ ಆಯುಕ್ತರ ನಿಯಂತ್ರಣದಲ್ಲಿ ನೇಮಿಸುವುದು ಸೂಕ್ತ ಎಂದು ಭಾವಿಸಿ ಈ ಕೆಳಕಂಡಂತೆ ಆದೇಶ ಹೊರಡಿಸಲು ಸರ್ಕಾರ ತೀರ್ಮಾನಿಸಿದೆ. ಅಂತೆಯೇ ಈ ಆದೇಶ.

<u>ಸರ್ಕಾರದ ಆದೇಶ ಸಂಖ್ಯೆ:ಸಕಇ 97 ಬಿಸಿಎ 2007, ಬೆಂಗಳೂರು,ದಿನಾಂಕ:01.06.2007</u>

ರಾಜ್ಯದಲ್ಲಿ ಅಲೆಮಾರಿ ಜನಾಂಗದವರ ಸರ್ವತೋಮುಖ ಅಭಿವೃದ್ಧಿಗಾಗಿ ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸುವ ಸಲುವಾಗಿ ಪ್ರತ್ಯೇಕ ಒಂದು ವಿಶೇಷ ಕೋಶವೊಂದನ್ನು ಈ ಕೆಳಕಂಡಂತೆ ಒಬ್ಬ ವಿಶೇಷಾಧಿಕಾರಿ ಮತ್ತು ಸಿಬ್ಬಂದಿಯೊಡನೆ ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟಂತೆ ಮಾನ್ಯ ಆಯುಕ್ತರು/ನಿರ್ದೇಶಕರು, ಹಿಂದುಳಿದ ವರ್ಗಗಳ ಇಲಾಖೆ, ಬೆಂಗಳೂರು ಇಲ್ಲಿ 2006-07ನೇ ಸಾಲಿನಿಂದ ಅನ್ವಯಿಸುವಂತೆ ಸೃಜಿಸಿ ಪ್ರಾರಂಭಿಸಲು ಸರ್ಕಾರವು ಮಂಜೂರಾತಿ ನೀಡಿ ಆದೇಶಿಸಿದೆ.

| ಕ್ರ.ಸಂ. | ಹುದ್ದೆಗಳು | ಸಂಖ್ಯೆ |
|---|---|---|
| 1) | ಜಂಟಿ ನಿರ್ದೇಶಕರು | 01 |
| 2) | ಉಪ ನಿರ್ದೇಶಕರು | 01 |
| 3) | ಸಹಾಯಕ ನಿರ್ದೇಶಕರು | 01 |
| 4) | ಕಛೇರಿ ಅಧೀಕ್ಷಕರು | 01 |
| 5) | ಪ್ರಥಮ ದರ್ಜೆ ಸಹಾಯಕರು | 02 |
| 6) | ದ್ವಿತೀಯ ದರ್ಜೆ ಸಹಾಯಕರು | 02 |
| 7) | ಶೀಘ್ರಲಿಪಿಗಾರರು | 01 |

| | | |
|---|---|---|
| 8) | ಬೆರಳಚ್ಚುಗಾರರು | 01 |
| 9) | ವಾಹನ ಚಾಲಕರು | 02 |
| 10) | ಗ್ರೂಪ್ ಡಿ ನೌಕರರು | 02 |
| | ಒಟ್ಟು | 14 (ಹದಿನಾಲ್ಕು ಮಾತ್ರ) |

ಈ ಮೇಲ್ಕಂಡ ಹುದ್ದೆಗಳಿಗೆ ತಗಲುವ ವೆಚ್ಚವನ್ನು ಲೆಕ್ಕಶೀರ್ಷಿಕೆ 2225-03-001-0-71ರ ಅಡಿಯಲ್ಲಿಯೇ ಭರಿಸತಕ್ಕದ್ದು.

ಷರತ್ತುಗಳು

1. ಈ ವಿಶೇಷ ಕೋಶಕ್ಕೆ ಅಗತ್ಯವಿರುವ ಹುದ್ದೆಗಳನ್ನು ತಾತ್ಕಾಲಿಕವಾಗಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಸಿಬ್ಬಂದಿಯ ಮರು ಹೊಂದಾಣಿಕೆ/ನಿಯೋಜನೆಯ ಮೂಲಕ ತುಂಬತಕ್ಕದ್ದು.
2. ಇದಕ್ಕಾಗಿ ಸರ್ಕಾರದಿಂದ ಪ್ರತ್ಯೇಕ ಆದೇಶವನ್ನು ಹೊರಡಿಸಲು ಒತ್ತಾಯ ತರತಕ್ಕದ್ದಲ್ಲ.
3. ತತ್ಸಂಬಂಧದಲ್ಲಿ ತಗಲುವ ವೆಚ್ಚವನ್ನು ಆಯುಕ್ತರು/ನಿರ್ದೇಶಕರು ತಿಳಿಸಿರುವಂತೆ ಮೇಲ್ಕಾಣಿಸಿರುವ ಲೆಕ್ಕಶೀರ್ಷಿಕೆ ಯಡಿಯಲ್ಲಿಯೇ ಭರಿಸತಕ್ಕದ್ದು. ಮತ್ತು ಇದಕ್ಕೆ ಯಾವುದೇ ಕಾರಣಗಳಿಗಾಗಿ ಹೆಚ್ಚುವರಿ ಅನುದಾನವನ್ನು ಸರ್ಕಾರದಿಂದ ಕೋರತಕ್ಕದ್ದಲ್ಲ.
4. ಅಲೆಮಾರಿ ಜನಾಂಗದ ಅಭಿವೃದ್ಧಿಗಾಗಿ ಕೇಂದ್ರ ಮತ್ತು ರಾಜ್ಯ ಸರ್ಕಾರದ ಮಾರ್ಗಸೂಚಿಗಳನ್ವಯ ಈ ವಿಶೇಷ ಕೋಶವು ಕಾರ್ಯನಿರ್ವಹಿಸತಕ್ಕದ್ದು.
5. ಸದರಿ ವಿಶೇಷ ಕೋಶಕ್ಕೆ ಬೇಕಾಗುವ ಪೀಠೋಪಕರಣ, ವಾಹನ ಇತ್ಯಾದಿ ಅವಶ್ಯಕತೆಗಳನ್ನು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಸಾದಿಲ್ವಾರು ವೆಚ್ಚದಿಂದಲೇ ಭರಿಸತಕ್ಕದ್ದು ಮತ್ತು ಇದಕ್ಕಾಗಿ ಪ್ರತ್ಯೇಕ ಅನುದಾನ ಕೋರುವಂತಿಲ್ಲ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ,
ಮತ್ತು ಅವರ ಹೆಸರಿನಲ್ಲಿ,

20/6/07

(ಪಿ.ಎಂ. ಚಿದಾನಂದಸ್ವಾಮಿ)
ಸರ್ಕಾರದ ಅಧೀನ ಕಾರ್ಯದರ್ಶಿ-II
ಸಮಾಜ ಕಲ್ಯಾಣ ಇಲಾಖೆ.

ಇವರಿಗೆ:

ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು ಮುಂದಿನ ಸಂಚಿಕೆಯಲ್ಲಿ ಪ್ರಕಟಣೆಗಾಗಿ ಹಾಗೂ ಪ್ರಕಟಿತ 500 ಪ್ರತಿಗಳನ್ನು ಸರ್ಕಾರದ ಸಮಾಜ ಕಲ್ಯಾಣ ಇಲಾಖೆಯ ಅಧೀನ ಕಾರ್ಯದರ್ಶಿ-2 ರವರಿಗೆ ಕಳುಹಿಸುವಂತೆ ಕೋರಲಾಗಿದೆ.

ಪ್ರತಿಗಳು:

1. ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು.
2. ನಿರ್ದೇಶಕರು, ಹಿಂದುಳಿದ ವರ್ಗಗಳ ಇಲಾಖೆ, ಬೆಂಗಳೂರು-1.

3. ಸರ್ಕಾರದ ಇಲಾಖೆಯ ಎಲ್ಲಾ ಇಲಾಖಾ ಮುಖ್ಯಸ್ಥರು (ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ನಿರ್ದೇಶಕರ ಮುಖಾಂತರ)
4. ನಿರ್ದೇಶಕರು, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು.
5. ನಿರ್ದೇಶಕರು, ಅಲ್ಪಸಂಖ್ಯಾತರ ಇಲಾಖೆ, ಬೆಂಗಳೂರು.
6. ನಿರ್ದೇಶಕರು, ದೇವರಾಜ ಅರಸು ಸಂಶೋಧನಾ ಸಂಸ್ಥೆ, ಬೆಂಗಳೂರು-1.
7. ವ್ಯವಸ್ಥಾಪಕ ನಿರ್ದೇಶಕರು, ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ಬೆಂಗಳೂರು-20.
8. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ, ಬೆಂಗಳೂರು-1
9. ಅಧ್ಯಕ್ಷರು, ಕರ್ನಾಟಕ ರಾಜ್ಯ ಅಲೆಮಾರಿ ಜನಾಂಗದವರ ಅಭಿವೃದ್ಧಿ ಸಂಸ್ಥೆ, ನಂ.28, 2ನೇ ಕ್ರಾಸ್, ದುರ್ಗಾ ಲೇಔಟ್, ವಿದ್ಯಾರಣ್ಯಪುರಂ, ಬೆಂಗಳೂರು-97.
10. ಸಂಪಾದಕರು, ವಾಯ್ಸ್ ಆಫ್ ಫಾರ್ಮರ್ಸ್, ಕನ್ನಡ ಮಾಸ ಪತ್ರಿಕೆ, ನಂ.16, ಆಕಾಶವಾಣಿ ಲೇಔಟ್, ವಿದ್ಯಾರಣ್ಯಪುರ ಪೋಸ್ಟ್, ಬೆಂಗಳೂರು-97.
11. ಮಾನ್ಯ ಸಮಾಜ ಕಲ್ಯಾಣ ಸಚಿವರ ಆಪ್ತ ಕಾರ್ಯದರ್ಶಿಯವರಿಗೆ
12. ಮಾನ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಯವರಿಗೆ.
13. ಪ್ರಧಾನ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆ ರವರ ಆಪ್ತ ಸಹಾಯಕರಿಗೆ.
14. ಹೆಚ್ಚುವರಿ ಪ್ರತಿ/ ಶಾಖಾ ರಕ್ಷಾ ಕಡತ.